ನಾನು ನಿಮಗೆ ಯಾವುದನ್ನು ನಿಷೇಧಿಸಿದ್ದೇನೆಯೋ, ಅದರಿಂದ ಸಂಪೂರ್ಣವಾಗಿ ದೂರವಿರಿ. ನಾನು ನಿಮಗೆ ಯಾವುದನ್ನು ಆದೇಶಿಸಿದ್ದೇನೆಯೋ, ಅದನ್ನು ನಿಮಗೆ ಸಾಧ್ಯವಾದಷ್ಟು ಮಾಡಿರಿ

ಅಬೂ ಹುರೈರಾ ಅಬ್ದುರ್ರಹ್ಮಾನ್ ಇಬ್ನ್ ಸಖ್ರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: ನಾನು ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ಕೇಳಿದ್ದೇನೆ: "ನಾನು ನಿಮಗೆ ಯಾವುದನ್ನು ನಿಷೇಧಿಸಿದ್ದೇನೆಯೋ, ಅದರಿಂದ ಸಂಪೂರ್ಣವಾಗಿ ದೂರವಿರಿ. ನಾನು ನಿಮಗೆ ಯಾವುದನ್ನು ಆದೇಶಿಸಿದ್ದೇನೆಯೋ, ಅದನ್ನು ನಿಮಗೆ ಸಾಧ್ಯವಾದಷ್ಟು ಮಾಡಿರಿ. ಏಕೆಂದರೆ, ನಿಮಗಿಂತ ಹಿಂದಿನವರನ್ನು ನಾಶಮಾಡಿದ್ದು ಅವರ ಅತಿಯಾದ ಪ್ರಶ್ನೆಗಳು, ಮತ್ತು ಅವರು ತಮ್ಮ ಪ್ರವಾದಿಗಳೊಂದಿಗೆ ವ್ಯಕ್ತಿಪಡಿಸಿದ ಭಿನ್ನಾಭಿಪ್ರಾಯಗಳಾಗಿದ್ದವು."
[صحيح] [رواه البخاري ومسلم]

ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಮಗೆ ತಿಳಿಸಿಕೊಡುವುದೇನೆಂದರೆ, ಅವರು (ಪ್ರವಾದಿ) ನಮಗೆ ಒಂದು ವಿಷಯವನ್ನು ನಿಷೇಧಿಸಿದರೆ, ನಾವು ಯಾವುದೇ ವಿನಾಯಿತಿಯಿಲ್ಲದೆ ಅದರಿಂದ ದೂರವಿರುವುದು ಕಡ್ಡಾಯವಾಗಿದೆ. ಹಾಗೆಯೇ, ಅವರು ನಮಗೆ ಒಂದು ವಿಷಯವನ್ನು ಆದೇಶಿಸಿದರೆ, ನಾವು ಅದನ್ನು ನಮಗೆ ಸಾಧ್ಯವಾದಷ್ಟನ್ನು ಮಾಡಬೇಕು. ನಂತರ ಅವರು, ನಾವು ಹಿಂದಿನ ಕೆಲವು ಜನಾಂಗಗಳಂತೆ ಆಗಬಾರದೆಂದು ಎಚ್ಚರಿಸಿದರು. ಅವರು ತಮ್ಮ ಪ್ರವಾದಿಗಳಿಗೆ ಅವಿಧೇಯರಾಗುವುದರೊಂದಿಗೆ, ಅವರೊಡನೆ ಅತಿಯಾಗಿ ಪ್ರಶ್ನೆಗಳನ್ನು ಕೇಳಿದರು. ಆಗ ಅಲ್ಲಾಹು ಅವರನ್ನು ವಿವಿಧ ರೀತಿಯ ವಿನಾಶ ಮತ್ತು ಶಿಕ್ಷೆಯಿಂದ ಶಿಕ್ಷಿಸಿದನು. ಆದ್ದರಿಂದ, ನಾವು ಕೂಡ ಅವರು ನಾಶವಾದಂತೆ ನಾಶವಾಗದಿರಲು, ನಾವು ಅವರು ಮಾಡಿದಂತೆ ಮಾಡಬಾರದು.

https://sunnah.global/hadeeth/kn/show/66517